


ನೀವು ಅಲ್ಪ, ಸ್ವಲ್ಪ ಕಳಕೊಂಡರೂ, ವೆಲ್‌ಡನ್ ಅನ್ನಬೇಕಲ್ಲವೇ? ನಿಮ್ಮಿಂದ ಎಷ್ಟೊಂದು ಜನಸಮೂಹಕ್ಕೆ ಬದುಕು ಸಾಗಿಸಲು ಸಹಾಯ ಒದಗಿಸಿತು ಈ ಬಸ್ಸು ಎಂಬ ಕಾರಣಕ್ಕಾಗಿ. ಅಷ್ಟಕ್ಕೂ ಡೆಬಿಟ್, ಕ್ರೆಡಿಟ್ ಕಾರ್ಡುಗಳ ಈ ಯುಗದಲ್ಲಿ, ಪರ್ಸಲ್ಲಿ ಯಾರೂ ಹೆಚ್ಚಿನ ಹಣವೇನೂ ಇಡೋದಿಲ್ಲ ಎಂಬುದು ಸತ್ಯ. ನಿಮಗರಿಯದೇ ನೀವು ದಾನ ಧರ್ಮ ಮಾಡಿದ ಪುಣ್ಯ ಕಟ್ಟಿಕೊಂಡರೆ, ಅದಕ್ಕೆ ಬಸ್ಸೇ ಕಾರಣ.

ನೀವು ಓದಿ ಮರೆತಿರಬಹುದಾದ ಒಂದು ಸಂಗತಿ ನೆನಪಿಸಲೇಬೇಕು. ಕಳೆದ ವರ್ಷವೊಂದರಲ್ಲೇ ನೂರಕ್ಕೂ ಹೆಚ್ಚು ಕಂದಮ್ಮಗಳು ಜನಿಸಿದ್ದು ಬಸ್ಸಿನಲ್ಲೇ. ಡಾಕ್ಟರು,